**Karnataka Power Transmission Corporation Limited** **01**

**Departmental Examination – March-2024**

**SAS PART-I PAPER -1**

**(English/Kannada-Precise Writing & Drafting)**

**(Books, Guide, Notes etc. Are Not Allowed)**

**Date : 11.03.2024** **Maximum Marks : 100** **Time : 9:30 am TO 12:30 pm**

---

## PART-A

**1. Write a precise of the following passage in about one-third of its length in your own words with a suitable title.** **10**

A dual transition-to a consolidated democracy and an advanced market economy-represents the main challenge that the Korean political and economic system currently confronts. During the two decades since it became a democracy. South Korea has faced lingering problems, such as poor governance, high-level corruption, lack of leadership, political conflicts, social polarisation, volatile public opinions, and lack of consensus on major issues.

At the same time, profound leadership changes have fundamentally changed the South Korean political landscape. The new leadership has attempted to dismantle social, economic, and political structures that were formed during the Cold War and to establish a more democratic and diplomatically independent society. Such an approach has resulted in further social and political conflict trials and errors in policy, civic distrust, and a lingering leadership crisis.

Although Korean democracy is successfully consolidated, it is far from effective. There are profound generational cleavages over various national issues, including economic and social policies. Policies toward North Korea and national defences, and attitudes towards the United States and China. Under these circumstances, political institutions have been pushed aside, and civic organisations are dominant.

**2. Read the following passage and answer the questions given below in your own words.** **10**

The voice had to be listened to, not only on account of its form but for the matter which it delivered. It gave a message to the country that it needed greatly. It brought to the common people a realization of their duty to concern themselves with their affairs. The common people were made to take an interest in the manner in which they were governed, in the taxes they paid, in the returns they received from those taxes. This interest in public affairs- politics as you may call it-was to be the concern no longer of the highly educated few but of the many-the poor, the propertyless, the working men in town and country.

Politics was not to be the concern of a small aristocracy of intellect or property of the masses. And with the change in the subjects of politics that this Voice brought about also a change in the objects of politics. Till then politics had busied itself mainly with the machinery of Government, towards making its personnel more native, with proposals for a better distribution of political power, with protests

against the sins of omission and commission of the administration. This Voice switched politics on to concerns for the needs of the common people. The improvement of the conditions of the poor was to be the main concern of politics and the politician. The improvements, especially of the lives of the neglected villagers were to be placed before Governments and political organizations as the goal of all political endeavors.

The raising of the standard of living of the people of the villages, the finding of subsidiary occupations which would give the agricultural poor work for their enforced leisure during the off season and an addition to their exiguous income, the improvement of the housing of the poor, the sanitation of the villages-these were to be the objectives to be kept in view. In the towns, the slums and cheries were to receive special attention. There was especially a class of the poor for which that compassionate Voice pleaded and protested. This was for the so-called depressed class, the outcastes of Hindu society. The denial of elementary human rights to this class of people is considered the greatest blot on Hindu society and history. It raised itself in passionate protest against the age-old wrongs of this class and forced those that listened to it to endeavor to remove the most outrageous of them like untouchabillity. It caused a revolution in Hindu religious practice by having Hindu temples thrown open to these people. It made the care of them a religious duty of the Hindus by re-naming them Harijans.

**Questions:**

a) Why did people have to listen to the 'Voice'?
b) Why did people have to take an interest in politics?
c) What was the change brought about in the objects of politics?
d) What improvements were made for the common man?
e) Explain :-
   i. Sins of omission and of commission of the administration.
   ii. No longer the monopoly of the classes, but the property of the masses.

**3. Combine the following sentences and convert into Present Perfect Continuous One.** **3**

a) It is raining. It began two hours ago and it is still raining.
b) He is learning. He is learning for the past two years.
c) Debbie is a very good tennis player. She's playing since she was eight.

**4. Change the following sentences from Active voice to Passive voice and vice versa.** **3**

a) Cats catch mice.
b) That boy stole my books.
c) I shall pardon him.
d) You may be helped by him.
e) This letter was written by Ali.

**5. Use the following phrases in your own sentences.** **4**

a) Back of my hand.
b) Herculean task.
c) Double minded.
d) Hand to mouth.

**6. Change the voice of the sentences suitably,** **5**

a) Why did he defraud you of your earnings?
b) One may accomplish many things by a little effort.
c) They laughed at his warnings and objected to all his proposals.
d) Who taught you French?
e) Promises should be kept.

**7. Change the following from direct to indirect speech.** **5**

a) 'I have just one word to say to you', said the dealer. 'Either make your purchase, or walk out of my shop'.
b) 'Ah! You don't know what these beans are', said the man; if you plant them over-night, by morning they grow right up to the sky'.
c) 'What a stupid fellow you are! 'he angrily remarked.
d) 'He said to him, 'Is not your name Ram?'
e) 'Call the first witness' said the Judge.

**8. Write the most appropriate meaning of the given idioms:-** **5**

a) In a nut shell
b) Beat around the Bush
c) Strain every nerve
d) Out for the count
e) Tricks of the trade

**9. Translate the following of Kannada.** **5**

Kannada previously also known as Canaries is a Dravidian language spoken predominantly by the people of Karnataka in south-western India, with minorities in all neighbouring states. It has around 44 million native speakers, and is additionally a second or third language for around 15 million non-native speakers in Karnataka. Kannada was the court language of a number of dynasties of south and central India, namely the Kadambas, Chalukyas, Rashtrakutas, Yadava Dynasty or Senas, Western Ganga dynasty, Wodeyars of Mysore, Nayakas of Keladi, Hoysalas and the Vijayanagara empire. The official and administrative language of the state of Karnataka, it also has scheduled status in India and has been included among the country's designated classical languages.

# PART B

10. Address a letter by the Zonal Chief Engineer (Electy), Office of BESCOM to all the Offices in his Jurisdiction to prepare a Plan of Action and to make good the revenue shortage by collecting the revenues due from Govt. Installations and also personal visits by the Divisional Officers. **10**

11. Address a Circular to all the Offices of KPTCL by Director (Admn.&HR) duly referring the GOK, Order of maintaining the Cash posses declaration and its significance. **10**

12. Prepare a Draft of Proposal put forth by an Accounts Officer to the Executive Engineer (Ele) at the time of Inspection of an Accounting Unit and found that Shortage of Cash with reference to the Cash Denomination Register and Physical Cash. **10**

13. Draft a detailed Circular from General Manager (A & HR), ESCOM strictly instructing workmen and supervisory staff to strictly follow safety Measures and supply /use safety equipment while attending electrical works. **10**

14. Draft an Inspection Report to be submitted by the Deputy Controller (Internal-Audit) KPTCL at the time of Store Inspection of TL &SS Divisional Store stating that to dispose off the Scrap Material laying in the Store. **10**

# ಕನ್ನಡ

## ಭಾಗ–ಎ

**1. ಈ ಕೆಳಕಂಡ ಗದ್ಯಭಾಗವನ್ನು ಸಂಕ್ಷಿಪ್ತಗೊಳಸಿ. ಸೂಕ್ತ ಶಿರೋನಾಮೆ ಬರೆಯಿರಿ** **10**

ಜೂನ್ ತಿಂಗಳಲ್ಲಿ ಕಾಲೇಜುಗಳಿಗೆ ಪ್ರವೇಶ ಪರೀಕ್ಷೆ ನಡೆಯುತ್ತಿತ್ತು. ಸಹಸ್ರಾರು ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಸಿದ್ಧತೆ ನಡೆಸಿದ್ದರು. ಯಾರು ಹೆಚ್ಚಿನ ಅಂಕಗಳಸುತ್ತಾರೋ ಅವರಿಗೆ ಮಾತ್ರ ಅವಕಾಶ ಹೀಗಾಗಿ ಪೈಪೋಟಿ ಹೆಚ್ಚಾಗಿತ್ತು. ಅಭ್ಯರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ, ಬೇರೆ ಬೇರೆ ವಿಷಯಗಳಲ್ಲಿ ಬಂದ ಅಂಕಗಳನ್ನು ಕ್ರೋಢಿಕರಿಸಿ ಅಂತಿಮವಾಗಿ ಆಯ್ಕೆ ಆಗಿರುವವರ ಪಟ್ಟಿ ತಯಾರಿಸುವುದಕ್ಕೆ ಯಂತ್ರವೊಂದನ್ನು ಬಳಸಲಾಗುತ್ತಿತ್ತು. ಅಭ್ಯರ್ಥಿಗಳ ಉತ್ತರಪತ್ರಿಕೆಗಳನ್ನು ಪರಿಶೀಲಿಸಿ, ಅವರಿಗೆ ಬಂದ ಅಂಕಗಳನ್ನು ಒಂದು ಯಂತ್ರದಲ್ಲಿ ತುಂಬಿಸುತ್ತಿದ್ದರು. ಎಲ್ಲವನ್ನೂ ಅಲ್ಲಿ ಭರ್ತಿ ಮಾಡಿದ ನಂತರ ಯಂತ್ರ ಆಯ್ಕೆಯಾದವರ ಪಟ್ಟಿಯನ್ನು ನೀಡುತ್ತಿತ್ತು. ಈ ಪಟ್ಟಿಗಾಗಿ ಎಷ್ಟೊಂದು ಜನ ಕಾತರದಿಂದ ಕಾಯುತ್ತಿದ್ದರು. ಉನ್ನತ ಸ್ಥಾನ ಪಡದವರು ತುಂಬ ಬುದ್ಧಿವಂತರೆಂದೇ ಹೆಸರಾಗುತ್ತಿತ್ತು.

ಹೆನ್ರಿ ಕಾರ್ಸನ್ ಎಂಬ ಬಾಲಕ ಈ ಪರೀಕ್ಷೆಗೆ ಕುಳಿತಿದ್ದ. ಅವನಿಗೆ ಹೈಸ್ಕೂಲ್ ಮಟ್ಟದಲ್ಲಿ ಅಂತಹ ಹೆಚ್ಚಿನ ಗುಣಗಳೇನೂ ಬಂದಿರಲಿಲ್ಲ. ಆತ ತುಂಬಾ ಸಾಧಾರಣವಾದ ಹುಡುಗ ಎಂತಲೇ ಎಲ್ಲ ಶಿಕ್ಷಕರ ಅಭಿಪ್ರಾಯ. ಆತನಿಗೂ ಕೂಡಾ ತನ್ನ ಸಾಧನೆಯ ಬಗ್ಗೆ ಅಭಿಮಾನವಾಗಲೀ, ಭವಿಷ್ಯದ ಬಗ್ಗೆ ಬಹು ದೊಡ್ಡ ಅಪೇಕ್ಷೆಯಾಗಲೀ ಇರಲಿಲ್ಲ. ಹಾಗೆ ನೋಡಿದರೆ ಅವನಿಗೆ, ಈ ಪ್ರವೇಶಪರೀಕ್ಷೆಯಲ್ಲಿ ಪಾಸಾಗಿ ಕಾಲೇಜಿನಲ್ಲಿ ಅಭ್ಯಾಸ ಮಾಡಲು ಅನುಮತಿ ಸಿಗುವುದರಲ್ಲಿ ನಂಬಿಕೆಯೇ ಇರಲಿಲ್ಲ, ಆದರೂ ಪ್ರಯತ್ನ ಮಾಡುತ್ತೇನೆ ಎಂದು ಪರೀಕ್ಷೆ ತೆಗೆದುಕೊಂಡಿದ್ದ. ಪರೀಕ್ಷೆಯ ಫಲಿತಾಂಶ ಬಂದಿತು. ಹೆನ್ರಿ ಕಾರ್ಸನ್ ಗೆ ಆಶ್ಚರ್ಯ, ಸಂತೋಷ ಒಟ್ಟೊಟ್ಟಿಗೆ ಆದವು. ಆತ ಪರೀಕ್ಷೆಯಲ್ಲಿ ಪ್ರಥಮವಾಗಿದ್ದಾನೆ. ಇವನಿಗಿಂತ ಎಷ್ಟೋ ಪಾಲು ಬುದ್ಧಿವಂತರು, ಅಸಮಾನ್ಯ ಚಾಣಾಕ್ಷರು ಎನ್ನಿಸಿಕೊಂಡವರಿಗಿಂತ ಹೆಚ್ಚಿನ ಅಂಕಗಳನ್ನು ಪಡೆದಿದ್ದಾನೆ. ಇವನ ಶಿಕ್ಷಕರಿಗೆಲ್ಲಾ ತುಂಬಾ ಅಚ್ಚರಿ. ಇಂಥ ಪರೀಕ್ಷೆಯಲ್ಲಿ ಇಷ್ಟು ಅಂಕಪಡೆದು ಪ್ರಥಮನಾದ ವಿದ್ಯಾರ್ಥಿ ನಿಜವಾಗಿಯೂ ಬುದ್ಧಿವಂತನಾಗಿರಲೇಬೇಕು. ಏಕೆಂದರೆ ಪರೀಕ್ಷೆಯ ರೀತಿಯೇ ಹಾಗಿತ್ತು. ಇಂಥ ಬುದ್ಧಿವಂತ ವಿದ್ಯಾರ್ಥಿಯನ್ನು ನಾವಿಷ್ಟು ದಿನ ಅದು ಹೇಗೆ ಗಮನಿಸಲಿಲ್ಲ ಎಂಬ ಚಿಂತೆಯಾಯಿತು ಶಿಕ್ಷಕರಿಗೆ. ತಾವು ತುಂಬ ಸಾಧಾರಣ ವಿದ್ಯಾರ್ಥಿ ಎಂದುಕೊಂಡಿದ್ದ ತಮ್ಮ ಮಗ ಇಂಥ ಸಾಧನೆಮಾಡಬಹುದು ಎಂದು ತಂದೆ–ತಾಯಿಯರೂ ಊಹಿಸಿರಲಿಲ್ಲ.

ಹೆನ್ರಿ ಕಾರ್ಸನ್ ಬುದ್ಧಿವಂತಿಕೆ ಮನೆಮನೆಯ ಮಾತಾಯಿತು. ಅವನ ಕಾಲೇಜಿನ ಶಿಕ್ಷಕರು ಅವನನ್ನು ನೋಡುವ ರೀತಿಯೇ ಬೇರೆಯಾಯಿತು. ಅವನ ಸಹ ವಿದ್ಯಾರ್ಥಿಗಳು ಕೂಡಾ ಪ್ರತಿಯೊಂದು ವಿಷಯದ ಬಗ್ಗೆ ಹೆನ್ರಿ ಏನು ಹೇಳುತ್ತಾನೆ ಎಂದು ಕಾಯ್ದು ನೋಡುತ್ತಿದ್ದರು. ದಿನದಿನಕ್ಕೆ ಅವನ ಪ್ರತಿಭೆ ಹೆಚ್ಚುತ್ತಲೇ ಹೋಯಿತು. ಹೆನ್ರಿಗೂ ತನ್ನಲ್ಲಿದ್ದ ಆದರೆ, ಇರುವರೆವಿಗೂ ಪ್ರಕಟವಾಗದಿದ್ದ ಶಕ್ತಿಯ, ಬುದ್ಧಿಮತ್ತೆಯ ಅರಿವಾಗತೊಡಗಿತು. ಅವನು ಕಾಲೇಜು ಶಿಕ್ಷಣವನ್ನು ಅತ್ಯಂತ ಯಶಸ್ವಿಯಾಗಿ ಮುಗಿಸಿ ಕಾನೂನಿನಲ್ಲಿ ಪ್ರಖ್ಯಾತನಾದ. ತನ್ನದೇ ಕಾರ್ಯಾಲಯವನ್ನು ತೆಗೆದ. ನಂತರ ಬ್ರಿಟಿಷ್ ಪಾರ್ಲಿಮೆಂಟಿಗೆ ಆಯ್ಕೆಯಾದ. ಇಂಗ್ಲೆಂಡಿನ ಅತ್ಯಂತ ಪ್ರಖರ ನ್ಯಾಯವಾದಿ ಎನ್ನಿಸಿಕೊಂಡ. ಸರ್ಕಾರದ ಸಾಲಿಸಿಟರ್ ಜನರಲ್ ಎಂದು ಆಯ್ಕೆಗೊಂಡ. ಮುಂದೆ ಅಟಾರ್ನಿ ಜನರಲ್ ಆಗಿ ಇವನಂಥ ಕಾನೂನು ತಜ್ಞ ಹಿಂದೆ ಇರಲಿಲ್ಲ, ಮುಂದೆ ಇರಲಿಕ್ಕಿಲ್ಲ ಎಂಬ ಹೆಸರನ್ನು ಪಡೆದ.

ಒಂದು ತಮಾಷೆಯ ವಿಷಯ ಗೊತ್ತೆ? ಈತ ಕಾಲೇಜು ಸೇರಿ ಶಿಕ್ಷಣ ಪಡೆದು ಮುಗಿಸಿ ಬಂದ ಮೇಲೆ, ಎಂದರೆ ಪ್ರವೇಶ ಪರೀಕ್ಷೆಯಾಗಿ ಹತ್ತು ವರ್ಷಗಳ ನಂತರ ಒಂದು ವಿಷಯ ಬಯಲಿಗೆ ಬಂತು. ಪ್ರವೇಶ ಪರೀಕ್ಷಾಕೇಂದ್ರದ ಅಧಿಕಾರಿಗಳು ಶಿಕ್ಷಕರು ಕೈಯಿಂದ ಬರೆದುಕೊಟ್ಟ ಅಂಕಪಟ್ಟಿಗಳನ್ನು ಜೋಡಿಸಿ ತೆಗೆದಿಡುತ್ತಿದ್ದಾಗ ಆಕಸ್ಮತ್ತಾಗಿ ಹೆನ್ರಿ ಕಾರ್ಸನ್ ನ ಅಂಕಪಟ್ಟಿಯನ್ನು ನೋಡಿದರು. ಅವರಿಗೆ ಆಘಾತವಾಯಿತು. ಅವನಿಗೆ ಪ್ರವೇಶ ಸಿಗುವುದೇ ಅಸಾಧ್ಯ ಎನ್ನುವಷ್ಟು ಕಡಿಮೆ ಅಂಕಗಳು ಬಂದಿದ್ದವು. ಹಾಗಾದರೆ ಇವನು ಪ್ರಥಮ ಹೇಗಾದ? ನಂತರ ತಿಳಿಯಿತು ವಿಷಯ. ಒಂದು ಇಲಿ ಯಂತ್ರದಲ್ಲಿ ಸೇರಿಕೊಂಡು ಓಡಾಡುತ್ತಿರುವಾಗ ಅದು ಆಕಸ್ಮತ್ತಾಗಿ ಯಾವುದೋ ಒಂದು ಗುಂಡಿಯನ್ನು ಒತ್ತಿಬಿಟ್ಟಿದೆ. ಅದರಿಂದ ಹೆನ್ರಿ ಹೆಸರು ಮೊದಲನೆಯದಾಗಿತ್ತು.

ಅವನು ಎಲ್ಲಿಯವರೆಗೂ ತುಂಬಾ ಸಾಮಾನ್ಯ ಬಾಲಕ ಎಂದುಕೊಂಡಿದ್ದನೋ ಅಲ್ಲಿಯವರೆಗೆ ಅವನ ಸಾಧನೆ ಸಾಧಾರಣವೇ ಆಗಿತ್ತು. ಯಾವಾಗ ತಾನು ವಿಶೇಷ ಶಕ್ತಿಯುಳ್ಳವನೋ ಎನ್ನಿಸಿತೋ, ಸಾಧನೆಯೂ ಉನ್ನತವಾಯಿತು. ಇದು ಹೆನ್ರಿಯ ಕಥೆ ಮಾತ್ರ ಅಲ್ಲ ನಮ್ಮೆಲ್ಲರ ಕಥೆ. ನಮ್ಮ ವಿಶ್ವಾಸವೇ ಸಾಧನೆಯ ಅಡಿಪಾಯ. ಅದನ್ನೆಂದಿಗೂ ಕಳೆದುಕೊಳ್ಳ ಬಾರದು.

**2. ಈ ಲೇಖನವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ.** **10**

ಎಲ್ಲೋ ಒಂದು ಕಡೆ ಓದಿದ ನೆನಪು.

ಒಂದು ಸರ್ಕಾರಿ ಶಾಲಾ ವಿದ್ಯಾರ್ಥಿಗಳೊಂದಿಗೆ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರು ಮಾತನಾಡುವಾಗ ಅವರನ್ನು ನೀವು ಜೀವನದಲ್ಲಿ ಮುಂದೆ ಏನಾಗಬೇಕೆಂದಿದ್ದೀರಿ? ಬಹಳ ವಿದ್ಯಾರ್ಥಿಗಳಿಂದ ಕುತೂಹಲಕಾರಿ ಉತ್ತರಗಳು ಹೊರಹೊಮ್ಮಿದವು. ಇಂಜಿನೀಯರ್, ಡಾಕ್ಟರ್, ಆಫೀಸರ್, ಪೈಲೆಟ್ ಇತ್ಯಾದಿ ಸಾಮಾನ್ಯ ಉತ್ತರಗಳಾದರೆ, ಮನರಂಜನೆ ಉತ್ತರಗಳಾದ ಸಿನಿಮಾ ನಟ, ನಟಿ, ಗೂಢಚಾರ, ಆದರೆ, ಯಾರೂ ರಾಜಕಾರಣಿಯಾಗುತ್ತೇನೆಂದು ಉತ್ತರಿಸಲಿಲ್ಲ. ನಾನು ತುಂಬಾ ಸಾಹುಕಾರ ನಾಗಬೇಕು, ತುಂಬಾ ದುಡ್ಡಿರುವವನಾಗಬೇಕು, ಶ್ರೀಮಂತನಾಗಬೇಕು, ಎಂಬಂತಹ ಉತ್ತರಗಳೂ ಮೂಡಿಬಂತು. "ನಾನು ರವಿಬೆಳಗೆರೆ ಯಂತೆ ಆಗಬೇಕು. ಅವರು ಟೀವಿಯಲ್ಲಿ ನಡೆಸಿಕೊಡುವ ಕಾರ್ಯಕ್ರಮಗಳ ನಿರೂಪಣೆ ಎಂತಹವರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ. ಮತ್ತೊಬ್ಬ ವಿಧ್ಯಾರ್ಥಿ ಹೇಳಿದ್ದುದು ಹೀಗೆ " ನಾನು ಅಮಿತಾಭ್ ಬಚ್ಚನ್ ರಂತಾಗಬೇಕು. ಏಕೆಂದರೆ, ಅವರು ನಡೆಸಿಕೊಡುವ 'ಕೌನ್ ಬನೇಗಾ ಕರೋಡ್ ಪತಿ' ಯಲ್ಲಿ ಉತ್ತರಿಸುವ ಪ್ರತೀ ಪ್ರಶ್ನೆಗೆ ಚೆಕ್ ಬರೆದು ಕೊಡುವ ರೀತಿ ಇಷ್ಟವಾಯಿತು. ಆರಾಮವಾಗಿ ಕುಳಿತು ಲಕ್ಷಗಟ್ಟಲೆ ಚೆಕ್ ಬರೆಯುವುದು ಬಹಳ ಹಿಡಿಸುತ್ತದೆ. ಸಾದ್ಯವಾದರೆ ನಾನೂ ಹಾಗೇ ಲಕ್ಷಗಟ್ಟಲೆ ಹಣ ಕೊಡಬೇಕೆಂದು ಆಸೆ. ಮತ್ತೊಬ್ಬ ವಿಧ್ಯಾರ್ಥಿ ಹೇಳಿದ್ದುದು ಹೀಗೆ " ನಾನು ಅಬ್ದುಲ್ ಕಲಾಂ ರವರಂತೆ ದೊಡ್ಡ ವಿಜ್ಞಾನಿ ಯಾಗಬೇಕು. ನನಗೆ ವಿಜ್ಞಾನದಲ್ಲಿ ಬಹಳ ಆಸಕ್ತಿಯಿದೆ. ವೈಜ್ಞಾನಿಕ ಸಂಶೋಧನೆಗಳನ್ನು ಮಾಡಬೇಕು.

ಎಂಟನೇ ತರಗತಿಯಲ್ಲಿ ಓದುತ್ತಿರುವ ಒಬ್ಬ ಹುಡುಗಿ ಉತ್ತರಿಸಿದ್ದು ಹೀಗೆ ' ನಾನು ದೊಡ್ಡವಳಾದ ಮೇಲೆ ಕ್ಯಾನ್ಸರ್ ಗೆ ಔಷಧವನ್ನು ಕಂಡುಹಿಡಿಯುತ್ತೇನೆ'. ಎಂದಾಗ ಎಲ್ಲರಿಗೂ ಆಶ್ಚರ್ಯ ಈ ಹುಡುಗಿಗೆ ಕ್ಯಾನ್ಸರ್ ಬಗ್ಗೆ ಹೇಗೆ ಗೊತ್ತು? ಆಕೆಯೇ ಹೇಳಿದ ಉತ್ತರ ' ನಮ್ಮ ಅಪ್ಪ ಅಮ್ಮನಿಗೆ ನಾನೊಬ್ಬಳೇ ಮಗಳು. ಮೂರುವರೆ ವರ್ಷಗಳ ಹಿಂದೆ ನಮ್ಮಪ್ಪ ಕ್ಯಾನ್ಸರ್ ನಿಂದ ಸತ್ತು ಹೋದರು. ನನ್ನ ತಾಯಿ ಒಬ್ಬರೇ ನನ್ನನ್ನು ಹೇಗೋ ಸಾಕುತ್ತಿದ್ದರು. ಆರು ತಿಂಗಳ ಹಿಂದೆ ಅವರೂ ಕ್ಯಾನ್ಸರ್ ನಿಂದ ಹೋಗಿಬಿಟ್ಟರು. ನಾನು ಅನಾಥೆಯಾಗಿ ಬಿಟ್ಟೆ. ಯಾರೋ ನನ್ನನ್ನು ಅನಾಥಾಶ್ರಮಕ್ಕೆ ಸೇರಿಸಿದ್ದಾರೆ. ಮನೆಯಲ್ಲಿ ಬಿಸಿ ಊಟ ಇರಲಿಲ್ಲವಾದರೂ, ತಂಗಳನ್ನೇ ತಾಯಿ ಪ್ರೀತಿಯಿಂದ ತಿನ್ನಿಸುತ್ತಿದ್ದರು. ಈಗ ಅನಾಥಾಲಯದಲ್ಲಿ ಊಟದ ಬೆಲ್ ಆದಾಗ ಕ್ಯೂನಲ್ಲಿ ತಟ್ಟೆ ಹಿಡಿದು ನಿಲ್ಲಬೇಕು. ಅವರು ತಟ್ಟೆಗೆ ಎಸೆದಿದ್ದನ್ನು ಒಂದು ಮೂಲೆಯಲ್ಲಿ ಕುಳಿತು ತಿನ್ನಬೇಕು. ಆಗ ನಾನು ಅಮ್ಮನ್ನ ಜ್ಞಾಪಿಸಿಕೊಂಡು ಅಳುವಂತೆ ಮತ್ತ್ಯಾವ ಮಕ್ಕಳೂ ಅಳಬಾರದು. ಅದಕ್ಕೋಸ್ಕರ ನಾನು ಕ್ಯಾನ್ಸರ್ ಗೆ ಔಷಧಿ ಕಂಡುಹಿಡಿಯಬೇಕೆಂದುಕೊಂಡಿದ್ದೇನೆ' ಎಂದು ಹೇಳುವಾಗ ಆಕೆಯ ಕಣ್ಣೂ ಒದ್ದೆ, ಕೇಳಿದವರ ಕಣ್ಣೂ ಒದ್ದೆ.

ಅವರವರ ಆಸೆಗಳು ಈಡೇರಲಿ ಎಂಬ ಹಾರೈಕೆಯೊಡನೆ ಕಾರ್ಯಕ್ರಮ ಮುಕ್ತಾಯವಾಯಿತು. ನಾವೂ ನಮ್ಮ ಪರಿಚಯದ ಮಕ್ಕಳನ್ನು ಯಾವಾಗಲಾದರೊಮ್ಮೆ ನೀವು ಏನಾಗಬೇಕೆಂದಿದ್ದೀರಿ ಎಂದು ಕೇಳಿದರೆ ಬರುವ ಉತ್ತರಗಳು ಬಹುಶ: ನಮ್ಮ ಕಣ್ಣೂ ತೆರೆಸಲೂಬಹುದು ಅಥವಾ ಕಣ್ಣು ಒದ್ದೆಯಾಗಿಸಬಹುದು

**ಪ್ರಶ್ನೆಗಳು**.

a) ಕಾರ್ಯಕ್ರಮ ನಡೆಯುತ್ತಿದ್ದುದು ಎಲ್ಲಿ?

b) ಮುಖ್ಯ ಶಿಕ್ಷಕರು ವಿಧ್ಯಾರ್ಥಿಗಳನ್ನು ಉದ್ದೇಶಿಸಿ ಕೇಳಿದ ಪ್ರಶ್ನೆ ಏನು?

c) ಮನರಂಜನೆಯ ಉತ್ತರಗಳು ಯಾವುವು?

d) ಕುತೂಹಲಕಾರಿ ಉತ್ತರಗಳು ಯಾವುವು?

e) ಮನಸ್ಸಿಗೆ ಘಾಢವಾಗಿ ತಟ್ಟುವಂತೆ ನೀಡಿದ ಉತ್ತರವೇನು?

3. ಈ ಕೆಳಗಿನ ಕಂಡಿಕೆಯನ್ನು ಇಂಗ್ಲೀಷ್ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ; **5**

**Investment of Properties:**

Property that is held for long-term rental yields or for capital appreciation or both, and that is not occupied by the Company, is classified as Investment Property. Investment Property is measured initially at its cost including related transcation costs and where applicable borrowing costs. Subsequent expenditure is capitalized to the assetes carrying amount only when it is probable that future economic benefits associated with the expenditure will flow to the Company and the cost of the item can be measured reliably.

4. ಈ ಕೆಳಗಿನ ನುಡಿಗಟ್ಟುಗಳಿಗೆ ಅರ್ಥ ಬರೆಯಿರಿ **5**

| | | |
|---|---|---|
| a) ಹದ್ದಿನ ಕಣ್ಣು | b) ಸಿಂಹ ಸ್ವಪ್ನ | c) ಗಾಳಿಗೆ ತೂರು |
| d) ಓರೆಗೆ ಹಚ್ಚು | e) ಕಣ್ಣುರಿ | |

5. ಈ ಕೆಳಗಿನ ಪದಗಳಿಗೆ ತದ್ಭವಗಳನ್ನು ಬರೆಯಿರಿ **3**

a) ಅರ್ಕ

b) ಕುಸ್ತುಂಬರ

c) ವೃಷಭ

6. ಅರಿ ಸಮಾಸ ಎಂದರೇನು? ಒಂದು ಉದಾಹರಣೆಯನ್ನು ನೀಡಿರಿ. **2**

7. ಈ ಕೆಳಗಿನ ವಿಷಯದ ಕುರಿತು 150 ಪದಗಳು ಮೀರದಂತೆ ಪ್ರಬಂಧ ಬರೆಯಿರಿ; **5**

"ಸಮಯದ ಮೌಲ್ಯ"

8. ಈ ಕೆಳಗಿನ ಗಾದೆಗಳನ್ನು ನಿಮ್ಮ ಸ್ವಂತ ವ್ಯಾಕ್ಯಗಳಲ್ಲಿ ಉಪಯೋಗಿಸಿ ಬರೆಯಿರಿ; **5**

a) ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು

b) ಎತ್ತು ಏರಿಗೆ ಎಳೆಯಿತು ಕೋಣ ನೀರಿಗೆ ಎಳೆಯಿತು

c) ಕುಣಿಯಲು ಬಾರದವಳು ನೆಲ ಡೊಂಕು ಅಂದಳಂತೆ

d) ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ

e) ಕೋಣನ ಮುಂದೆ ಕಿನ್ನರಿ ಬಾರಸಿದಂತೆ.

9. ಈ ಕೆಳಗಿನ ವಾಕ್ಯಗಳಲ್ಲಿರುವ ದ್ವಿರುಕ್ತಿ ಪದಗಳನ್ನು ಗುರ್ತಿಸಿ ವಿಭಜಿಸಿ ಬರೆಯಿರಿ. **2.5**

a) ಎಲೆಲಾ! ಮೂರ್ಖ, ನಿಲ್ಲು ನಿಲ್ಲು! ಬಂದೆ.

b) ಅಬ್ಬಬ್ಬಾ !. ಎಂಥ ರಮ್ಯ ನೋಟವಿದು !

c) ಅಹಹಾ! ಈತನ ಆಟ ಆಶ್ಚರ್ಯಕರ!.

d) ಹೌದೌದು! ಯೋಗ್ಯನಿಗೇ ಸಂಭಾವನೆ ದೊರೆತಿದೆ.

e) ಇಲ್ಲವಲ್ಲಾ ! ನಾನು ಹೇಳಿದ್ದು ಹಾಗೇನಲ್ಲ.

10. ಬಹುವ್ರೀಹಿ ಸಮಾಸ ಎಂದರೇನು? ಎರಡು ಉದಾಹರಣೆಯನ್ನು ನೀಡಿರಿ. **2.5**

## ಭಾಗ–ಬಿ

11. ಕಂದಾಯ ಉಪವಿಭಾಗದಲ್ಲಿ ನಗದು ಕಾರ್ಯ ನಿರ್ವಹಿಸುತ್ತಿರುವ ನಗದು ಸಹಾಯಕನು ಒಂದು ದಿನದ ಮಟ್ಟಿಗೆ ಸಾಂಧರ್ಬಿಕ ರಜೆಯನ್ನು ಹಾಗೂ ಕೇಂದ್ರ ಸ್ಥಾನವನ್ನು ತೆರವುಗೊಳಸಲು ಅನುಮತಿಯನ್ನು ಸಮುಚಿತ ಮಾರ್ಗದ ಮೂಲಕ ಅನುಮೋದನೆ ಕೋರುವ, ಹಾಗೂ ಕಂದಾಯ ಅಧಿಕಾರಿಯ ಶಿಫಾರಸ್ಸಿನ ಮೂಲಕ ಉಪವಿಭಾಗಾಧಿಕಾರಿಗೆ ಸಲ್ಲಿಸುವ ಮತ್ತು ಅನುಮೋದನೆ ನೀಡುವ ಪ್ರಕ್ರಿಯೆಯ ಕರಡನ್ನು ಬರೆಯಿರಿ. **10**

12. ಮುಖ್ಯ ಇಂಜಿನಿಯರ್(ವಿ) ವಲಯ ಕಛೇರಿ, ಬೆವಿಕಂ ರವರು ತಮ್ಮ ಅಧೀನ ಕಚೇರಿಗಳಿಗೆ ಕಂದಾಯ ಕೊರತೆಯನ್ನು ನೀಗಿಸಲು ಸೂಕ್ತ ಕಿಯಾಯೋಜನೆ ರೂಪಿಸಿ ಅಗತ್ಯ ಕ್ರಮಗಳನ್ನು ವಹಿಸುವಂತೆ ಮತ್ತು ಸರ್ಕಾರದ ಕಚೇರಿಗಳಲ್ಲಿನ ಸ್ಥಾವರಗಳ ಬಾಕಿಯನ್ನು ವಸೂಲು ಮಾಡಲು ಸ್ವಯಂ ಉಪ ವಿಭಾಗಾಧಿಕಾರಿಗಳು ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡುವಂತೆ ಸೂಚಿಸುವ ಪತ್ರವನ್ನು ಸಿದ್ಧಪಡಿಸಿರಿ.**10**

13. ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ) ಕವಿಪ್ರನಿನಿ ರವರು ನಿಗಮದ ಎಲ್ಲಾ ಕಛೇರಿಗಳಲ್ಲಿ ರಾಜ್ಯ ಸರ್ಕಾರದ ಸುತ್ತೋಲೆಯನ್ನು ಉಲ್ಲೇಖಿಸಿ ನಗದು ನಿರ್ವಹಣೆ ರಿಜಿಸ್ಟರ್ ನ ನಿರ್ವಹಣೆ ಹಾಗೂ ಅದರ ಔಚಿತ್ಯವನ್ನು ವಿವರಿಸಿ ಜಾರಿಗೊಳಿಸುವ ಸುತೋಲೆಯನ್ನು ಬರೆಯಿರಿ. **10**

14. ಸೈಬರ್ ಭದ್ರತಾ/ ಅಪರಾಧ ವಿಷಯಗಳಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹೆಚ್.ಆರ್.ಡಿ ಕೇಂದ್ರ, ಹೂಡಿ, ಕವಿಪ್ರನಿನಿ, ಬೆಂಗಳೂರು ಇಲ್ಲಿ ದಿನಾಂಕ: 10.01.2024 ರಂದು ಒಂದು ದಿನದ ತರಬೇತಿ ಕಾರ್ಯಕ್ರಮಕ್ಕೆ ತರಬೇತಿಯ ಎಲ್ಲಾ ಸೂಚನೆಗಳನ್ನು ನಮೂದಿಸಿ ಅಧಿಕಾರಿಗಳನ್ನು ನಿಯೋಜಿಸಿರುವ ಕರಡು ಅಧಿಕೃತ ಜ್ಞಾಪನ ಪತ್ರವನ್ನು ಸಿದ್ಧಪಡಿಸಿ. **10**

15. ವಿದ್ಯುತ್ ಸಂಬಂಧಿತ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಸಿಬ್ಬಂದಿ ಹಾಗೂ ಮೇಲ್ವಿಚಾರಕರು ಸುರಕ್ಷತಾ ಸಾಮಗ್ರಿಗಳನ್ನು ಒದಗಿಸುವ/ಬಳಸುವ ಹಾಗೂ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವ ಬಗ್ಗೆ ಶಿಸ್ತು ಕ್ರಮದ ಬಗ್ಗೆ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ), ವಿಸಕಂ ರವರಿಂದ ಒಂದು ಸವಿಸ್ತಾರವಾದ ಸುತ್ತೋಲೆಯನ್ನು ಹೊರಡಿಸಿರಿ. **10**

*********